**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.**

**ಸಿಸಿ ನಂಬರ ಃ 192/2022**

| | | | |
|---|---|---|---|
| ಸಾಕ್ಷಿಯ ಹೆಸರು | ಃ ಚಂದ್ರಪ್ಪ | ಸಿ.ಡಬ್ಲ್ಯು | 10 |
| ತಂದೆಯ ಹೆಸರು | ಃ ರುದ್ರಪ್ಪ | ಪಿ.ಡಬ್ಲ್ಯು | 4 |
| ವಯಸ್ಸು | ಃ 58 ವರ್ಷ | | |
| ಉದ್ಯೋಗ | ಃ ಕೂಲಿ | | |
| ವಾಸ ಸ್ಥಳ | ಃ ಬೆಟ್ಟದಹಳ್ಳಿ. | | |

**ದಿನಾಂಕಃ 02-04-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ನನಗೆ ಚಾಸಾ-1 ಮತ್ತು 9 ರವರ ಪರಿಚಯ ಇದೆ. ನಿಪಿ.5 ಮೇಲೆ ನೊಡುತ್ತಿರುವ ಸಹಿ ನನ್ನದೇ ಇರುತ್ತದೆ ಅದನ್ನು ಅಪಘಾತವಾದ ಸ್ಥಳ ದಲ್ಲಿ ಮಾಡಿರುತ್ತೇನೆ. ಕುಮಾರಪ್ಪ ಎಂಬ ವ್ಯಕ್ತಿ ಅಪಘಾತದಲ್ಲಿ ತೀರಿಕೊಂಡ ಸ್ಥಳದಲ್ಲಿ ಪೊಲೀಸರು ಪಂಚನಾಮೆ ಮಾಡಿದ್ದಾರೆ. ಆ ಸಮಯಕ್ಕೆ ಚಾಸಾ-9 ಕೂಡಾ ನನ್ನ ಜೊತೆ ಹಾಜರಿದ್ದರು. ಅಪಘಾತದ ಸ್ಥಳ ಯಾರು ತೋರಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಪಿ.6 ಫೋಟೊದಲ್ಲಿ ನಾನು ಇದ್ದೇನೆ. ಪಂಚನಾಮೆಯನ್ನು ಮಾಡಿ ಮೂರು ವರ್ಷ ಆಗಿರಬಹುದು.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ-**

ಪಂಚನಾಮೆಗೆ ಸ್ಥಳವನ್ನು ಚಾಸಾ-1 ರವರು ತೋರಿಸಿರುತ್ತಾರೆ. ಅಪಘಾತದ ಮಾರನೇ ದಿನ ಪಂಚನಾಮೆ ಮಾಡಿದ್ದಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಅಪಘಾತವಾದ ಮಾರನೇ ದಿನ ಪೊಲೀಸರಿಂದ ಅಪಘಾತದ ವಿಷಯ ಗೊತ್ತಾಗಿದೆ. ಮಹಜರನಲ್ಲಿ ಎನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಚಾಸಾ-9 ನನ್ನ ಸಂಬಂಧಿಕರು ಇರುತ್ತಾರೆ. ಪೊಲೀಸರ ಕೋರಿಕೆಯ ಮೇರೆಗೆ ಪಂಚನಾಮೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ.

**ಮರುವಿಚಾರಣೆ :** ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

*ಓ ಹೇ ಕೇ ಸ ಇ ಎ ಒ*

**Sd/-**

*ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ*
*ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.*